**ಅಸಲು ದಾವೆಃ251/2011**

**ಸಾಕ್ಷಿಯನ್ನು ದಿಃ 18.01.2023 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

ಸಾಕ್ಷಿದಾರರು ಕನ್ನಡ ಭಾಷೆ ಅರ್ಥವಾಗುವುದಿಲ್ಲವೆಂದು ತಿಳಿಸಿದ ಮೇರೆಗೆ ಶ್ರೀಮತಿ.ಚನ್ನಮ್ಮ ವಕೀಲರವರನ್ನು ಭಾಷಾಂತಕಾರರಾಗಿ ನೇಮಿಸಿ ಅವರಿಗೆ ಪ್ರಮಾಣ ಭೋಧಿಸಲಾಯಿತು.

ಪಾಟೀಸವಾಲು ಃ ಶ್ರೀ.ಕೆ.ಎಂ.ವಿ 1 ನೇ ಪ್ರತಿವಾದಿ ಪರ ವ ಕೀಲರಿಂದಃ

ಈ ದಾವೆಯನ್ನು ನನ್ನ ಸಹೋದರನ ಮಗಳು ರೇಣುಕಾರವರು ನಮ್ಮ ವಿರುದ್ದ ಸಲ್ಲಿಸಿರುತ್ತಾರೆ. 1 ಮತ್ತು 2 ನೇ ವಾದಿಗಳು 2 ನೇ ಪ್ರತಿವಾದಿಯ ಮಕ್ಕಳು ಎಂದರೆ ಸರಿ. 3 ನೇ ವಾದಿಯು 2 ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ. ದಾವೆಗೆ ಸಂಬಂಧಪಟ್ಟ ಎಲ್ಲಾ ಸ್ವತ್ತುಗಳು ಪಿರ್ತಾಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ದಾವಾಸ್ವತ್ತುಗಳ ಪೈಕಿ ನಾನು ಒಂದು ಸ್ವತ್ತನ್ನು ಖರೀಧಿಸಿರುತ್ತೇನೆ. ಉಳಿದ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳಾಗಿರುತ್ತವೆ. ನಮ್ಮ ಪಿರ್ತಾಜಿತ ಸ್ವತ್ತುಗಳು ಎಂದರೆ ಒಂದು ಮನೆ ಮತ್ತು ಒಂದು ಜಮೀನು ಇರುತ್ತದೆ. ನಮ್ಮ ತಂದೆ ಮೃತಪಟ್ಟು 50 ವರ್ಷಗಳಾಗಿರುತ್ತದೆ.

ಯಾವ ಸ್ವತ್ತುಗಳು ದರಕಾಸ್ತಿನಲ್ಲಿ ಮಂಜೂರು ಆಗಿದೆ ಎಂದು ನನಗೆ ಹೇಳಲು ಆಗುವುದಿಲ್ಲ. ಸದರಿ ಜಮೀನುಗಳ ಸಂಬಂಧ ಮ್ಯುಟೇಷನ್ ಮತ್ತು ಪಹಣಿಗಳು ಯಾವ ವರ್ಷದಲ್ಲಿ ಆಗಿರುತ್ತವೆ ಎಂದು ನೆನಪಿರುವುದಿಲ್ಲ. ಎಲ್ಲಾ ದಾವಾಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳಾಗಿದ್ದು 2 ನೇ ಪ್ರತಿವಾದಿಗೆ ಭಾಗ ಕೊಡದೇ ಎಲ್ಲಾ ಸ್ವತ್ತುಗಳನ್ನು ನಾನೇ ಇಟ್ಟುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿಯು ತನ್ನ ಹೆಂಡತಿ ಮಕ್ಕಳಾದ ವಾದಿಯರನ್ನು ನಿರ್ಲಕ್ಷ್ಯ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯು ನಿರ್ಲಕ್ಷ್ಯ ಮಾಡಲು ನಾನೇ ಕಾರಣ ಎಂದರೆ ಸರಿಯಲ್ಲ. ವಾದಿಯರು 2 ನೇ ಪ್ರತಿವಾದಿಯ ವಿರುದ್ಧ ಜೀವನಾಂಶ ಕೋರಿ ಅರ್ಜಿಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯು ವಾದಿಯರನ್ನು ನೋಡಿಕೊಳ್ಳದೇ ಇರುವುದಕ್ಕೆ ನಾನು 2 ನೇ ಪ್ರತಿವಾದಿಗೆ ಪ್ರೇರಣೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿಯು ವಾದಿಗಳಿಗೆ ಜೀವನಾಂಶ ಕೊಡದೇ ಮತ್ತು ಯಾವುದೇ ಆಸ್ತಿಗಳನ್ನು ಕೊಡದೇ ತೊಂದರೆ ನೀಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ತೊಂದರೆ ನೀಡಲು ನಾನೇ ಕಾರಣ ಎಂದರೆ ಸರಿಯಲ್ಲ. ವಾದಿಗಳಿಗೆ ಅವರ ಭಾಗಾಂಶದ ಸ್ವತ್ತನ್ನು ನೀಡದೇ ನಾನು ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಇರುವ ಉಳಿದ ಪ್ರತಿವಾದಿಗಳ ಬಗ್ಗೆ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದಲ್ಲಿ ಏನು ತಕರಾರು ಸಲ್ಲಿಸಿರುತ್ತೇನೆ ಎಂದು ಗೊತ್ತಿಲ್ಲ. ನಾನು ನನಗೆ ಸಂಬಂಧಿಸಿದ ದಾಖಲಾತಿಗಳನ್ನು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ಅವರು ನ್ಯಾಯಾಲಯಕ್ಕೆ ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ.

ವಾದಿಗಳು ಈ ಪ್ರಕರಣದಲ್ಲಿ ಯಾವ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ವಕೀಲರ ಮುಖಾಂತರ ವಾದಿಗಳು ಸಲ್ಲಿಸಿರುವ ದಾಖಲಾತಿಗಳ ಬಗ್ಗೆ ತಿಳಿದುಕೊಂಡಿರುವುದಿಲ್ಲ.

ದಾವಾ ಐಟಂ ನಂ. 4 ಸ್ವತ್ತನ್ನು ನಾನು ದಿನಾಂಕ 02-05-2002 ರಲ್ಲಿ ಒಟ್ಟು ಕುಟುಂಬದಿಂದ ಬಂದ ಆದಾಯದಿಂದ ಖರೀಧಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಬೇರೆ ಆದ ಮೇಲೆ ಖರೀಧಿಸಿರುತ್ತೇನೆ. ನಾನು ಬೇರೆಯಾಗಿ ಸುಮಾರು 20 ವರ್ಷಗಳಾಗಿರುತ್ತದೆ. ನಾನು ಒಟ್ಟು ಕುಟುಂಬದಿಂದ ಬೇರೆ ಯಾದ ದಿನಾಂಕ ಹೇಳಲು ಆಗುವುದಿಲ್ಲ. ಈಗ ತೋರಿಸಿದ ಪೋಟೋದಲ್ಲಿ ಕಾಣಿಸಿರುವ ಮನೆ ನಾನು ವಾಸವಿರುವ ಮನೆ ಎಂದರೆ ಸರಿ. ಸದರಿ ಪೋಟೋವನ್ನು ನಿಪಿ 18 ಎಂದು ಗುರುತಿಸಲಾಯಿತು. ಈಗ ತೋರಿಸಿದ ಪೋಟೋದಲ್ಲಿರುವ ಮನೆ ವಾದಿಗಳು ವಾಸವಿರುವ ಮನೆ ಎಂದರೆ ಸರಿ. ಸದರಿ ಪೋಟೋವನ್ನು ನಿಪಿ 19 ಎಂದು ಗುರುತಿಸಲಾಯಿತು. ನಿಪಿ 18 ರ ಪೋಟೋದಲ್ಲಿ ಕಾಣಿಸುವ ಮನೆಯನ್ನು ಕಟ್ಟಿ 10 ವರ್ಷಗಾಗಿರುತ್ತದೆ. ಸದರಿ ಮನೆಯನ್ನು ಚಿನ್ನಪ್ಪಯ್ಯ ಎಂಬ ಮೇಸ್ತ್ರಿ ಕಟ್ಟಿರುತ್ತಾರೆ. ನಾನು ಮನೆ ಕಟ್ಟಿರುವುದಕ್ಕೆ ಲೆಕ್ಕ ಇಟ್ಟುಕೊಂಡಿರುವುದಿಲ್ಲ. ಸದರಿ ಮನೆಯಲ್ಲಿ ವಾದಿಗಳಿಗೆ ಭಾಗ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಮನೆ ಕಟ್ಟಿರುವ ಜಾಗವೂ ನಮ್ಮ ಪಿತ್ರಾರ್ಜಿತ ಸ್ವತ್ತಿನಲ್ಲಿ ಬರುತ್ತದೆ ಎಂದರೆ ಸರಿ. ಸದರಿ ಮನೆಯು ಈಗ ಗ್ರಾಮಠಾಣೆಗೆ ಸೇರಿರುತ್ತದೆ. ಸದರಿ ಮನೆಯು ಗ್ರಾಮಠಾಣೆಗೆ ಸೇರಿರುವ ಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ.

ದಾವಾ ಐಟಂ ನಂ. 4 ರ ಸ್ವತ್ತನ್ನು ದಿ:01-07-2021 ರಂದು ನಾನು ಪ್ರತಿವಾದಿ 7 ರವರಿಗೆ ನೋಂದಾಯಿತ ದಾನಪತ್ರದ ಮುಖಾಂತರ ಬರೆದುಕೊಟ್ಟಿರುತ್ತೇನೆ ಎಂದರೆ ಸರಿ. ಸದರಿ ಸ್ವತ್ತನ್ನು ಪರಭಾರ ಮಾಡುವ ಹಕ್ಕು ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ತೊಂದರೆ

ಕೊಡಲು ಮತ್ತು ಮೋಸ ಮಾಡಲು ನಾನು ಸದರಿ ದಾನಪತ್ರವನ್ನು ಬರೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತು ನನ್ನ ಸ್ವಂತ ಸ್ವತ್ತು ಆಗಿರುತ್ತದೆ. ಈ ಸ್ವತ್ತೂ ಸಹಾ ಕುಟುಂಬಕ್ಕೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. 2011 ರಿಂದಲೂ ಸದರಿ ಸ್ವತ್ತು ಈ ಪ್ರಕರಣದಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಸ್ವತ್ತನ್ನು ಪರಭಾರೆ ಮಾಡಲು ನ್ಯಾಯಾಲಯದ ಅನುಮತಿ ಪಡೆದಿಲ್ಲ ಎಂದರೆ ಸರಿ.

ನಮ್ಮ ತಂದೆ ಮೃತಪಟ್ಟ ನಂತರ ನಮ್ಮ ಕುಟುಂಬವನ್ನು ನಾನೇ ನೋಡಿಕೊಳ್ಳುತ್ತಿದ್ದೆ ಎಂದರೆ ಸರಿ. ನಾನು ಹೇಳಿದಂತೆ ಎಲ್ಲಾ ಸದಸ್ಯರು ಕೇಳುತ್ತಿದ್ದರು ಎಂದರೆ ಸರಿ. ದಾವಾಸ್ವತ್ತುಗಳಲ್ಲಿ 2 ನೇ ಪ್ರತಿವಾದಿಗೆ ಅರ್ಧ ಭಾಗದ ಸ್ವತ್ತು ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು 2 ನೇ ಪ್ರತಿವಾದಿಗೆ ಆತನ ಭಾಗ ನೀಡಿರುವುದಾಗಿ ಉತ್ತರಿಸುತ್ತಾರೆ. ನನ್ನ ಮತ್ತು 2 ನೇ ಪ್ರತಿವಾದಿಯ ನಡುವೆ ಯಾವುದೇ ಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 19 ರ ಫೋಟೋದಲ್ಲಿ ಕಾಣಿಸುವ ಮನೆ ಸಹಾ ನಮ್ಮಗಳ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ವಾದಿಗಳಿಗೆ ಭಾಗ ಕೊಡಬೇಕಾಗುತ್ತದೆ ಎಂದು ಸುಳ್ಳು ಪ್ರತಿವಾದಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಉಳಿದ ಪ್ರತಿವಾದಿಗಳಪರ ವಕೀಲರು ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)**

**ಓ ಹೇ ಕೇ ಸರಿ ಇದೆ.**

**Sd/-**

(ಕೇಶವಮೂರ್ತಿ.ಬಿ)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ, ಬಂಗಾರಪೇಟೆ